**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**
**ನಂಜನಗೂಡು**

**<u>ಸಿ.ಸಿ.ಸಂಖ್ಯೆಃ 258/2015</u>**

**ಪಿರ್ಯಾದಿ** ಃ ಸರ್ಕಾರದ ಪರಃ ಬದನವಾಳು ಪೊಲೀಸರು

**ವಿರುದ್ಧ**

**ಆರೋಪಿ** ಃ ಮುದ್ದೇಗೌಡ ಬಿನ್ ಲೇ.ನಿಂಗೇಗೌಡ, 51 ವರ್ಷ,
ದೇವನಹಳ್ಳಿ ಗ್ರಾಮ, ಟಿ.ನರಸೀಪುರ ತಾಲ್ಲೂಕು,

**<u>ದೋಷಾರೋಪಣೆ</u>**

ಶ್ರೀನಾಥ್.ಎ, 1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶನಾದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕಃ 08.01.2014 ರಂದು ಮಧ್ಯಾಹ್ನ 01.15 ಗಂಟೆ ಸಮಯದಲ್ಲಿ ಬದನವಾಳು ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹೊಸಕೋಟೆ ಗ್ರಾಮದ ಸಾಕ್ಷಿ-2 ಯೋಗಮೂರ್ತಿ ರವರ ಮನೆಯ ಮುಂಭಾಗದಲ್ಲಿ ಹಾದುಹೋಗಿರುವ ಸುತ್ತೂರು - ಮೈಸೂರು ಮುಖ್ಯ ರಸ್ತೆಯಲ್ಲಿ ಸಾಕ್ಷಿ-2 ರವರು ಹುರುಳಿ ಗಿಡಗಳನ್ನು ಬಡಿಯಲು ಹಾಕಿದ್ದು ಆರೋಪಿತರಾದ ನೀವು ಕೆಎ-09-ಎಫ್-4923 ಮೈಸೂರು ನಗರ ಸಾರಿಗೆ ಬಸ್ಸನ್ನು ಅತಿವೇಗ ಮತ್ತು ಅಡ್ಡದಿಡ್ಡಿಯಾಗಿ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆಮಾಡಿಕೊಂಡು ಬಂದು ಸಾಕ್ಷಿ-2 ರವರ ಮೇಲೆ ಬಸ್ಸನ್ನು ಹತ್ತಿಸುವಂತೆ ನಟಿಸಿದ ಕಾರಣ ಭಾರತ ದಂಡ ಸಂಹಿತೆ ಕಲಂ 279 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಬಸ್ಸನ್ನು ನಿಲ್ಲಿಸಿ ಇಳಿದು ಬಂದು ರಸ್ತೆಯಲ್ಲಿ ಏಕೆ ಹುರುಳಿಗಿಡ ಹಾಕಿದ್ದೀಯಾ ಎಂದು ಬಾಯಿಗೆ ಬಂದಂತೆ ಸಾಕ್ಷಿ-2 ರವರಿಗೆ ಬೋಳಿ ಮಗನೆ, ಸೂಳೆ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನಮಾಡಿ ಶಾಂತಿಯನ್ನು ಭಂಗಮಾಡಿದ ಕಾರಣ ಭಾರತ ದಂಡ ಸಂಹಿತೆ ಕಲಂ 504 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಕೈಗಳಿಂದ ಸಾಕ್ಷಿ-2 ರವರಿಗೆ ಹೊಡೆದು ಸ್ವಯಂ ಪ್ರೇರಿತವಾಗಿ

ನೋವುಂಟುಮಾಡಿದ ಕಾರಣ ಭಾರತ ದಂಡ ಸಂಹಿತೆ ಕಲಂ 323 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಬಸ್ ನಲ್ಲಿದ್ದ ಸಾಕ್ಷಿ-1 ಸುತ್ತೂರು ನಂಜುಂಡನಾಯ್ಕರವರು ಸಮಧಾನಪಡಿಸಲು ಬಂದಾಗ, ನೀನ್ಯಾರು ಕೇಳಲು ಎಂದು ಈ ವಿಚಾರಕ್ಕೆ ಬಂದರೆ ನಿನ್ನ ಮೇಲೂ ಬಸ್ಸನ್ನು ಹತ್ತಿಸಿ ಮುಗಿಸುತ್ತೇನೆಂದು ಕೊಲೆ ಬೆದರಿಕೆ ಹಾಕಿದ ಕಾರಣ ಭಾರತ ದಂಡ ಸಂಹಿತೆ ಕಲಂ 506 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

**ಮೇಲ್ಕಂಡ ಆಪಾದನೆಗೆ ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.**

ಸಹಿ/-

**ದಿನಾಂಕಃ 08.01.2020** 1 ನೇ ಹೆ.ಸಿ.ಜೆ **ಮತ್ತು** ಜೆ.ಎಂ.ಎಫ್.ಸಿ.

ನಂಜನಗೂಡು